ಶಿಕ್ಷಣದ ಹಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ
ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ, ರಾಜ್ಯ ಯೋಜನಾ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ,
ಬೆಂಗಳೂರು–01, ದೂರವಾಣಿ: 080–22483580, 22484720, ಫಾಕ್ಸ್ : 080–22104179, 22126718
ಇಮೇಲ್: sarvashiksha@yahoo.com.in, ssamedia1234@gmail.com

ಸಂಖ್ಯೆ: ಸಶಿಅ/ಒಲಂಪಿಯಾಡ್–ಪರೀಕ್ಷೆ/2013–14 ದಿನಾಂಕ: 01.08.2013

# ಜ್ಞಾಪನ

ವಿಷಯ: ಶಾಲಾ ಹಂತದ ಒಲಂಪಿಯಾಡ್ ಪರೀಕ್ಷೆಯನ್ನು ದಿ: 31.08.2013 ರಂದು ಯಶಸ್ವಿಯಾಗಿ ನಡೆಸಲು ಸನ್ನದ್ದರಾಗುವ ಬಗ್ಗೆ.

ಉಲ್ಲೇಖ: 1. ಈ ಕಚೇರಿ ಪತ್ರ ಸಂಖ್ಯೆ: ಸಶಿಅ/ಯುನಿಸೆಫ್/ಒಲಂಪಿಯಡ್/2013–14 ದಿ: 22.06.13.

***********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಗಳ ಪತ್ರಗಳಲ್ಲಿ ಈಗಾಗಲೇ 6 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಒಲಂಪಿಯಾಡ್ ಪರೀಕ್ಷೆ ನಡೆಸುವ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಈ ಬಗ್ಗೆ ವಿಶೇಷವಾಗಿ ಶಾಲಾ ಹಂತದ ಒಲಂಪಿಯಾಡ್ ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದ ಇನ್ನು ಹೆಚ್ಚಿನ ವಿವರಗಳನ್ನು ನೀಡಲಾಗುತ್ತಿದೆ.

- ಶಾಲಾ ಹಂತದ ಪರೀಕ್ಷೆಯ ಪ್ರಶ್ನೆ ಪತ್ರಿಕೆ ತಯಾರಿಕೆಗೆ ಪೂರಕವಾಗಿ ಈ ಕಚೇರಿಯಿಂದ ಪ್ರತಿ ವಿಷಯದಲ್ಲಿ 150 ಪ್ರಶ್ನೆಗಳುಳ್ಳ ಒಂದೊಂದು ಮಾದರಿ ಸೆಟ್‌ನ್ನು ವೆಬ್‌ಗೆ ಬಿಡಲಾಗುತ್ತಿದೆ. ಪ್ರಶ್ನೆಪತ್ರಿಕೆಗಳ ಸೆಟ್ಟನ್ನು ಉಪಯೋಗಿಸಿಕೊಂಡು ಪ್ರತಿ ಶಾಲೆಗಳಲ್ಲಿ ಶಿಕ್ಷಕರು ಮಕ್ಕಳನ್ನು ಪರೀಕ್ಷೆಗೆ ತಯಾರಿ ಮಾಡುವ ಕಾರ್ಯ ಮಾಡಬೇಕು.
- ಈ ಪ್ರಶ್ನೆಗಳ ಮಾದರಿ ಸೆಟ್‌ಗಳಿಂದ ಪ್ರತಿ ವಿಷಯಕ್ಕೆ 50 ಅಂಕಗಳ ಪ್ರಶ್ನೆ ಪತ್ರಿಕೆಯನ್ನು ಶಾಲಾ ಹಂತದಲ್ಲಿ ದಿ: 25.08.13 ರೊಳಗೆ ತಯಾರಿಸಿಕೊಳ್ಳುವ ಮತ್ತು ಪರೀಕ್ಷೆಯನ್ನು ನಿಯಮಗಳಂತೆ ನಡೆಸಿ, ಫಲಿತಾಂಶ ಪಡೆಯುವವರೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಎಲ್ಲಾ ಸರ್ಕಾರಿ ಶಾಲೆಗಳಿಗೆ ಮಾರ್ಗದರ್ಶನ ನೀಡಬೇಕು. ಪ್ರಶ್ನೆ ಪತ್ರಿಕೆಗಳ ಗೌಪ್ಯತೆಗೆ ಆದ್ಯತೆ ನೀಡಬೇಕು ಮತ್ತು ಅವ್ಯವಹಾರಗಳಿಗೆ ಆಸ್ಪದವಾಗದಂತೆ ನೋಡಿಕೊಳ್ಳಬೇಕು.
- ಶಾಲಾ ಹಂತದಿಂದ ಬ್ಲಾಕ್ ಹಂತಕ್ಕೆ ಆಯ್ಕೆ ಆಗಬೇಕಾದ ವಿದ್ಯಾರ್ಥಿಗಳ ಸಂಖ್ಯೆಯು ಗಣಿತದಲ್ಲಿ 5% ಮತ್ತು ವಿಜ್ಞಾನದಲ್ಲಿ 5% ಇರಬೇಕು ಎಂಬುದನ್ನು ಮತ್ತೊಮ್ಮೆ ನೆನಪಿಸಿದೆ. ಒಂದೇ ಅಂಕ ಪಡೆದ ಕಾರಣದಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುವ ಸಂದರ್ಭಗಳು ಬರಬಹುದಾದ್ದರಿಂದ ಈ ವಿದ್ಯಾರ್ಥಿಗಳಲ್ಲಿ ಪುನ: ಆಯ್ಕೆ ಮಾಡುವ ಸಂಬಂಧ 05 ಪ್ರಶ್ನೆಗಳ ಒಂದೊಂದು ಪ್ರಶ್ನೆಪತ್ರಿಕೆಯನ್ನು ಪ್ರತಿ ಶಾಲೆಯಲ್ಲಿ ಹೆಚ್ಚುವರಿಯಾಗಿ ತಯಾರಿಟ್ಟುಕೊಳ್ಳಬೇಕು ಮತ್ತು ಅಂತಹ ಸಂದರ್ಭದಲ್ಲಿ ಆ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಪ್ರಶ್ನೆಪತ್ರಿಕೆ ಬಳಸಿ ಪುನ: ಪರೀಕ್ಷೆ ಮಾಡಿ ಆಯ್ಕೆ ಮಾಡಬೇಕು.
- ಈ ಹಿಂದೆ ನೀಡಿರುವ ಪರಿಷ್ಕೃತ ಸುತ್ತೋಲೆಯಲ್ಲಿ ನೀಡಿದ ಕೋಡ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಮುಂದಿನಂತೆ ಸರಳೀಕರಿಸಿದೆ. ಶಾಲಾ ಹಂತದ ಪರೀಕ್ಷೆಗೆ ವಿದ್ಯಾರ್ಥಿಗಳಿಗೆ ಆಯಾ ತರಗತಿಯ ಹಾಜರಿ ಸಂಖ್ಯೆಯನ್ನು ನೀಡಬೇಕು. ಮೌಲ್ಯಮಾಪನದ ನಂತರ ಶಾಲೆಗಳಿಂದ ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ದಿ: 03.09.13 ರೊಳಗೆ ಈ ಕೆಳಗಿನ ನಮೂನೆಯಲ್ಲಿ ಕಳುಹಿಸಿಕೊಡಬೇಕು.

**ಶಾಲೆಯ ಹೆಸರು ------------------ ತರಗತಿ----- ವಿಷಯ: -------------**

| ಕ್ರ.ಸಂ | ವಿದ್ಯಾರ್ಥಿಯ ಹೆಸರು | ಜನ್ಮ ದಿನಾಂಕ | ತಂದೆಯ ಹೆಸರು | ಸಾಮಾಜಿಕ ಗುಂಪು |
|---|---|---|---|---|
| | | | | |

ಶಾಲೆಗಳಿಂದ ಬಂದ ವಿದ್ಯಾರ್ಥಿಗಳ ಮಾಹಿತಿಯನ್ನು ಬ್ಲಾಕ್ ಹಂತದಲ್ಲಿ ಈ ಕೆಳಗಿನ ನಮೂನೆಯಲ್ಲಿ ಫೀಡ್ ಮಾಡಬೇಕು.

| ಕ್ರ.ಸಂ | ನೋಂದಣಿ ಸಂಖ್ಯೆ | | | | | | | ವಿದ್ಯಾರ್ಥಿಯ ಹೆಸರು | ಜನ್ಮ ದಿನಾಂಕ | ತಂದೆಯ ಹೆಸರು | ಸಾಮಾಜಿಕ ಗುಂಪು |
|---|---|---|---|---|---|---|---|---|---|---|---|
| | | | | | | | | | | | |

ಬ್ಲಾಕ್ ಹಂತದಲ್ಲಿ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆಯು ಈ ಕೆಳಗಿನಂತಿರಬೇಕು.

**ಜಿಲ್ಲಾ ಕೋಡ್ ಬ್ಲಾಕ್ ಕೋಡ್ ವಿದ್ಯಾರ್ಥಿಕೋಡ್**

| | | | | | | |
|---|---|---|---|---|---|---|
| | | | | | | |

ಈ ಬಾಕ್ಸ್‌ಗಳಲ್ಲಿ ಎಡದಿಂದ ಮೊದಲೆರಡು ಬಾಕ್ಸ್‌ಗಳಲ್ಲಿ ಜಿಲ್ಲಾ ಕೋಡ್, ನಂತರ 2 ಬಾಕ್ಸ್‌ಗಳಲ್ಲಿ ಬ್ಲಾಕ್‌ಕೋಡ್ ಮತ್ತು ಕೊನೆಯ 3 ಬಾಕ್ಸ್‌ಗಳಲ್ಲಿ ವಿದ್ಯಾರ್ಥಿಗಳ ಕೋಡ್ (001 ನಿಂದ ಪ್ರಾರಂಭಿಸಿ ಕೊನೆಯ ವಿದ್ಯಾರ್ಥಿಯವರೆಗೆ ರನ್ನಿಂಗ್ ನಂಬರ್ ನೀಡಬೇಕು) ತುಂಬಬೇಕು. ಸಾಫ್ಟ್ ಕಾಪಿಯನ್ನು ಡಯಟ್‌ಗೆ ದಿ: 05.09.13 ರೊಳಗೆ ನೀಡಬೇಕು. ಇದೇ ಕೋಡ್ ಸಂಖ್ಯೆಯು ರಾಜ್ಯ ಹಂತದವರೆಗೆ ಮುಂದುವರೆಯುತ್ತದೆ.

- ಬ್ಲಾಕ್‌ವಾರು/ ತರಗತಿವಾರು/ವಿಷಯವಾರು ವಿದ್ಯಾರ್ಥಿಗಳ ಸಂಖ್ಯೆಯನ್ನು ಡಯಟ್‌ನವರು ಕ್ರೋಢೀಕರಿಸಿ ರಾಜ್ಯ ಕಚೇರಿಗೆ ದಿ: 06.09.2013 ರೊಳಗೆ ಈ ಕೆಳಗಿನ ನಮೂನೆಯಲ್ಲಿ ಕಳುಹಿಸಿಕೊಡಬೇಕು.

| ಕ್ರ.ಸಂ | ಜಿಲ್ಲೆಯ ಹೆಸರು | ಬ್ಲಾಕ್‌ನ ಹೆಸರು | 6ನೇ ತರಗತಿ | | 9ನೇ ತರಗತಿ | |
|---|---|---|---|---|---|---|
| | | | ಗಣಿತದಲ್ಲಿ ವಿದ್ಯಾರ್ಥಿಗಳ ಸಂಖ್ಯೆ | ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಂಖ್ಯೆ | ಗಣಿತದಲ್ಲಿ ವಿದ್ಯಾರ್ಥಿಗಳ ಸಂಖ್ಯೆ | ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಂಖ್ಯೆ |
| | | | | | | |
| | | | | | | |
| | | ಒಟ್ಟು | | | | |

- ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಲ್ಲಿ ದಿ: 31.08.13 ರಂದು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ವಿಜ್ಞಾನ ಮತ್ತು 12.00 ರಿಂದ 1.00 ಗಂಟೆಯವರೆಗೆ ಗಣಿತ ವಿಷಯದಲ್ಲಿ ಶಾಲಾ ಹಂತದ ಪರೀಕ್ಷೆಗಳು ನಡೆಯುವ ಬಗ್ಗೆ ವ್ಯವಸ್ಥೆ ಮಾಡಿಕೊಳ್ಳಬೇಕು.
- **ಶಾಲಾ ಹಂತದ ಪರೀಕ್ಷೆಯ ಒಟ್ಟು ಖರ್ಚುವೆಚ್ಚವನ್ನು ಶಾಲಾ ಅನುದಾನದಲ್ಲಿಯೇ ಭರಿಸುವುದು.**
- ಈ ಮಾರ್ಗದರ್ಶನ ಪ್ರಕ್ರಿಯೆಯಲ್ಲಿ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರುಗಳು ತಮ್ಮ ವ್ಯಾಪ್ತಿಯ ಎಲ್ಲಾ ಹಂತದ ಅಧಿಕಾರಿಗಳು/ ಮೇಲ್ವಿಚಾರಕರುಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಮತ್ತು ಪರೀಕ್ಷೆಗಳು ಉತ್ತಮವಾಗಿ ಸರಿಯಾದ ಸಮಯಕ್ಕೆ ನಡೆಯುವಂತೆ ನೋಡಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ www.ssakarnataka.gov.in ಈ ವೆಬ್‌ಸೈಟ್‌ನ್ನು ಸಂಪರ್ಕಿಸಿ.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಡಿಡಿಪಿಐ(ಆಡಳಿತ) ಡಿಡಿಪಿಐ(ಅಭಿವೃದ್ಧಿ) ಇವರುಗಳಿಗೆ.